# ಎನ್‌ಐಟಿಕೆಯಲ್ಲಿ ರಾಷ್ಟ್ರೀಯ ಕಾರ್ಯಾಗಾರ

**ಮಂಗಳೂರು:** ಸುರತ್ಕಲ್‌ನ ಎನ್‌ಐಟಿಕೆಯಲ್ಲಿ ಮಾ.21ಮತ್ತು 22ರಂದು ಎಂಎಸ್‌ಎಂಇ ಸಚಿವಾಲಯ, ಸೆಂಟರ್ ಫಾರ್ ಸಿಸ್ಟಮ್ ಡಿಸೈನ್ ಮತ್ತು ಎಂಎಸ್‌ಎಂಇ ಡಿಎಫ್ ಮಂಗಳೂರು ಸಹಭಾಗಿತ್ವದಲ್ಲಿ ವಿನ್ಯಾಸ ಘಟಕಗಳ ಕುರಿತು ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರ ನಡೆಯಲಿದೆ. ಕಾರ್ಯಾಗಾರದಲ್ಲಿ ವಿಪ್ರೊ 3ಡಿ, ಲುಸಿಡ್ ಇಂಜಿನಿಯರಿಂಗ್, ಎನ್‌ಐಡಿ ಅಹಮದಾಬಾದ್ ಮತ್ತು ಎನ್‌ಐಟಿಕೆ ಪದವೀಧರರು, ಯಶಸ್ವಿ ಎಂಎಸ್‌ಎಂಇಗಳು, ಪರಿಣಿತ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಗಳನ್ನು ನೀಡಲಿದ್ದಾರೆ. ಈ ಉಚಿತ ಕಾರ್ಯಾಗಾರದಲ್ಲಿ ಭಾಗವಹಿಸುವವರು ಸ್ಥಳದಲ್ಲೇ ನೋಂದಾಯಿಸಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

Vijayavani, Date: 21/03/23, p. no - 01